

**ಒಂದು**

‘ಎನ್ನಾರ್’ ಕಾಲೇಜು ನಗರದಲ್ಲಿಯೇ ತುಂಬಾ ಹೆಸರುವಾಸಿಯಾದ ವಿದ್ಯಾಪ್ರದಾಯಕ ಕಾಲೇಜು. ಹಳಮೆಯಲ್ಲೂ ಈ ‘ಎನ್ನಾರ್’ ತುಂಬಾ ಮುಂದಿದೆ. ನಗರದಲ್ಲಿ ಇದೇ ತುಂಬಾ ಪುರಾತನ ಕಾಲೇಜು ಎಂಬ ಗರಿಯೂ ಇದಕ್ಕಿದೆ.

ನಾನು ಈ ‘ಎನ್ನಾರ್’ ಕಾಲೇಜಿನ ಲೈಬ್ರರಿ ಅಸಿಸ್ಟಂಟ್ ಆಗಿ ಬಂದಾಗ ನನ್ನ ವಯಸ್ಸು ಇಪ್ಪತ್ಮೂರು. ಬಿ.ಎ. ಓದಿದ್ದೆ. ನನ್ನ ಸೋದರ ಮಾವನಿಗೆ ಈ ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ವೆಂಕಟರಾಂ ಜೊತೆ ತುಂಬಾ ಬಳಕೆಯಿತ್ತು. ಅವರ ಮರ್ಜಿಯಿಂದಲೇ ನಾನಿಂದು ಇಲ್ಲಿರುವುದು; ಕಾಲೇಜಿನ ಅನ್ನ ತಿನ್ನುತ್ತಿರುವುದು. ನನ್ನ ಸೋದರಮಾವ ತುಂಬಾ ಒಳ್ಳೆಯ ಮನುಷ್ಯ. ಎಷ್ಟು ಒಳ್ಳೆಯವನು ಅಂದರೆ ನನ್ನಮ್ಮ ನನಗೆ ಹತ್ತು ವಯಸ್ಸಾಗಿದ್ದಾಗ ನನ್ನ ತಂದೆಯ ಸ್ನೇಹಿತನ ಜೊತೆ ಓಡಿಹೋದಾಗ ತಂದೆಯವರು ತಡಮಾಡದೆ ನನಗೊಬ್ಬಳು ಚಿಕ್ಕಮ್ಮನನ್ನು ವ್ಯವಸ್ಥೆ ಮಾಡಿದರು. ವರ್ಷ ಕಳೆಯುವುದರಲ್ಲಿ ತಂಗಿಯೊಬ್ಬಳು ಕಾಣಿಸಿಕೊಂಡಳು. ಹೆಣ್ಣು ಚಿಕ್ಕವಳೋ ದೊಡ್ಡವಳೋ ಅಂತೂ ಎಲ್ಲರಿಗೂ ಅವಳೆಂದರೆ ಆಸೆ; ಆಕರ್ಷಣೆ. ನಾನೋ ಉಪೇಕ್ಷೆಯ ಕಲ್ಲುಗುಂಡು.

ಚಿಕ್ಕಮ್ಮನ ಸವತಿಯ ಮಗನಾದ ನಾನು ಅನ್ನಕ್ಕೆ ಎರವಾದ ದಂಡಪಿಂಡ. ಮೈಗಳ್ಳ. ಚಿಕ್ಕಮ್ಮನ ಪ್ರತಿ ಮಾತು ದೂರೇ. ತಂದೆಗೆ ಪರಾಂಬರಿಸುವ ವ್ಯವಧಾನವಿಲ್ಲ. ತಾಲ್ಲೂಕು ಸಂತೆಯಲ್ಲಿ ಸಿಕ್ಕ ಸೋದರ ಮಾವನ ಕಿವಿಮೇಲೆ ನಮ್ಮ ಊರಿನ ಒಬ್ಬ ಸದ್ಗೃಹಸ್ಥರು ಹಾಕಿದರಂತೆ: ‘ನಿಮ್ಮ ತಂಗಿ ಮಗನನ್ನು ಅವಳು ಅವನಿಂದ ಕೊಲ್ಲಿಸದೆ ಬಿಡುವವಳಲ್ಲ!’ ಮಾವನ ಕರುಳು ಚುರುಕ್ ಎಂದಿತು. ಅಲ್ಲಿಂದಲೇ ಬಸ್ಸು ಹಿಡಿದರು. ತಂದೆಯೇನೋ ‘ಬೇಡ ಇವೆಲ್ಲ’ ಎಂದರು. ಚಿಕ್ಕಮ್ಮ ಉಸಿರು ಬಿಡಲಿಲ್ಲ. ಅಡುಗೆ ಮನೆಯಲ್ಲೆ ಉಳಿದಿದ್ದಳು. ಕೊನೆಗೆ ತಂದೆಯವರು ಮಾವನ ಜೊತೆ ಕಳಿಸಲು ಒಪ್ಪಿದರು.

ಮಾವ ನಗರದಲ್ಲಿ ನನ್ನನ್ನು ಮತ್ತೆ ಶಾಲೆಗೆ ಸೇರಿಸಿದರು. ಮಾಮಿ ಸ್ವಭಾವತಃ ಒಳ್ಳೆಯವಳು; ಅಂತಃಕರಣ ಉಳ್ಳವಳು. ತಾಯಿ ಹೀಗೆ ಮಾಡಿದಳಲ್ಲ ಎಂದು ಒಂದು ದಿನವೂ ಎತ್ತಿ ಆಡಲಿಲ್ಲ. ಪಾಪ! ಅವರಿಗೆ ಮಕ್ಕಳಿರಲಿಲ್ಲ. ಮಾಮಿ ಸುತ್ತದ ದೇವಾಲಯವಿಲ್ಲ; ಕಟ್ಟದ ಮುಡುಪಿಲ್ಲ; ಅಲೆಯದ ಆಸ್ಪತ್ರೆಯಿಲ್ಲ. ದೈವದ ಮನಸ್ಸಿಗೆ ಅದು ಬಂದಿಲ್ಲ ಎಂದು ಇಬ್ಬರೂ ನಿರ್ಣಯಿಸಿ ಸಮಾಧಾನ ತಂದುಕೊಂಡಿದ್ದಾರೆ.